ಎಂಬ ಪದ್ಯಕ್ಕೆ ಅರ್ಧ ಗಂಟೆಯ ಗಂಭೀರ ಅರ್ಥ ಹೇಳಿದ್ರು. ಶಲ್ಯನ ಪಾತ್ರಧಾರಿ ಎಲ್ಲವನ್ನೂ ಕೇಳಿಸಿಕೊಂಡು, 'ಕರ್ಣಾ ಇದು ಯುದ್ಧರಂಗವಲ್ಲವೇ? ಇಲ್ಲಿ ಬಾಣ ಹೂಡಿ ಹಾಗಾದಿತೋ ಹೀಗಾದೀತೋ ಅಂತ ಕೇಳುತ್ತ ಕುಳಿತಿರಲು ವ್ಯವಧಾನವಿದೆಯೇ? ವೈರಿ ಜಾಗೃತನಾಗುವ ಮೊದಲು ಬಾಣ ಹೂಡೆ' ಅಂದ. ಅದು ಎಲ್ಲಿತ್ತೋ ಜನರ ಉತ್ಸಾಹ. ಒಮ್ಮೆಲೇ ಚಪ್ಪಾಳೆ ಬಿತ್ತು. ಜೋಯಿಸರಿಗೆ ಅವಮಾನ ಆಯಿತು. ಏನೇನೋ ಸಮರ್ಥನೆಗೆ ಹೊರಟರು. ಅದು ಸಾಧ್ಯವಾಗಲೇ ಇಲ್ಲ. ಯುದ್ಧರಂಗದಲ್ಲಿ ಅಸ್ತ್ರ ಹೂಡಿದ ಬಳಿಕ ಅತಿಯಾದ ಸಂವಾದ ಸಲ್ಲದು ಎಂಬುದು ಒಂದೇ ತರ್ಕವಾಗಿತ್ತು ರಾಯರದ್ದು. ಅವತ್ತಿನ ಮಟ್ಟಿಗೆ ಶಲ್ಯನಾಗಿ ರಾಯರದ್ದು ಜೋಯಿಸರ ಎದುರು ಐತಿಹಾಸಿಕ ಗೆಲುವು. ಅವತ್ತು ಜೋಯಿಸರು ಉಷಾಳ ಹತ್ರ ಸಮಾ ಮಾತಾಡದೆ ದುರ್ದಾನ ತಕ್ಕೊಂಡವರ ಹಾಗೆ ಪ್ರಸಂಗ ಮುಗ್ದ ಮೇಲೆ ಎದ್ದು ಹೋಗಿದ್ದಿದ್ರು. ಆಗ ಅವಳು ಯೆಂತಕ್ಕೆ ಪಾಪ ಜೋಯಿಸರನ್ನು ಹೈಲ್ ಮಾಡಿದ್ದು? ( ಹಾಸ್ಯ ಮಾಡು ಎಂದು ಅರ್ಥ) ಅಂತ ತರಾಟೆಗೆ ತಕ್ಕೊಂಡ್ರು.

ಉಷಾ ಗಂಡು ಮಗುವೊಂದನ್ನು ಹಡೆದು ಕೈಗೆ ಕೊಟ್ಟವಳೇ ಹಸೀ ಬಾಣಂತಿ ಅನ್ನೂದನ್ನೂ ಕ್ಯಾರ್ ಮಾಡದೇ ಎಲ್ಲೆಲ್ಲಿ ಜೋಯಿಸರೋ ಅಲ್ಲಲ್ಲಿ ಇರ್ತಿದ್ಲು. ಕಡೆಗೊಂದು ದಿನ ರಾಯರು ನೋಡ್ತಾರೆ,ನಾನಿನ್ನು ಜೋಯಿಸರ ಉಪ ಪತ್ನಿ. ನಂಗೆ ಅವರೇ ದಿಕ್ಕು ಅಂತ ಚೀಟಿ ಬರ್ದಿಟ್ಟು ಹೊರಟು ಹೋಗಿದ್ಲು. ರಾಯರಿಗೆ ಮರ ಕಡ್ದು ತಲೆಗೆ ಹಾಕಿದ ಹಾಗೆ ಆಗಿತ್ತು. ಮೊದಲೇ ಒಳಗೊಳಗೇ ಅವಮಾನ ಅನುಭವಿಸ್ತಾ ಇದ್ದ ಅವ್ರಿಗೆ ಈಗ ನೇರವಾಗಿಯೇ ಮುಖಕ್ಕೆ ಕರಿ ಮೆತ್ತಿದ ಹಾಗಾಗಿತ್ತು. ಎರಡು ತಿಂಗಳ ಗಂಡು ಮಗು ಬೇರೆ ಕೈಯಲ್ಲಿ. ಆಗ ಅವರ ನೆರವಿಗೆ ಬಂದವರು ಅವರ ಅಕ್ಕ ನಿರ್ಮಲಾ. ಸಣ್ಣ ಪ್ರಾಯದಲ್ಲಿಯೇ ಗಂಡನನ್ನು ಕಳ್ಕೊಂಡಿದ್ದ ಅವರು ಮಕ್ಕಳಿಲ್ಲದೆ ಒಂಟಿ ಬಾಳು ಬಾಳ್ತಿದ್ರು. ಗಂಡನ ಮನೆಯ ಆಸ್ತಿಯೂ ಅಂಥದ್ದೇನೂ ಇರ್ಲಿಲ್ಲ. ಅವ್ರು ಸೀದ ತಮ್ಮನ ಮನೆಗೆ ಬಂದು, ತಮ್ಮನ ಮಗನನ್ನು ಸಾಕುವ, ಮನೆಯನ್ನು ಸರಿದೂಗಿಸುವ ಕೆಲಸಕ್ಕೆ ಮುಂದಾದ್ರು.

ರಾಯರಿಗೆ ತಂದೆ ತಾಯಿ ಸಣ್ಣ ಪ್ರಾಯದಲ್ಲೇ ತೀರಿಕೊಂಡಿದ್ದರಿಂದ ಹೇಳಿಕೊಳ್ಳುವಂಥ ಬಂಧು ಬಳಗ ಇರಲಿಲ್ಲ. ಆದ್ರೂ ಕುಟುಂಬದ ಒಂದಿಬ್ಬರನ್ನು, ಅಕ್ಕನನ್ನು ಮಗುವನ್ನು ಕರ್ಕೊಂಡು ಒಂದೆರಡು ಸರ್ತಿ ತ್ರಿವಿಕ್ರಮ ಜೋಯಿಸರ ಮನೆಗೆ ಹೋಗಿ ಉಷಾಳಿಗೆ ಬುದ್ಧಿ ಹೇಳಿಕ್ಕೆ ನೋಡಿದ್ರು. ಅವಳು ಎಲ್ಲಿ ಕೇಳ್ತಾಳೆ? ಜೋಯಿಸರ ಹೆಂಡತಿಯೇ ಉಷಾಳನ್ನು ಕಳಿಸಿಕೊಡಿ ನಿಮಗೆ ಯೆಂತಕ್ಕೆ ಈ ದುರ್ಬುದ್ಧಿ? ಅಂತ ಹೇಳಿದ್ರೂ ಕೇಳಿಲ್ಲ ಅವರು. ಕೆಲವರು ಪೋಲಿಸ್ ಕಂಪ್ಲೇಂಟ್ ಕೊಡುವಾ ಅಂದ್ರು. ಮತ್ತೆ ಕೆಲವರು ,ಕೋರ್ಟ್‌ಗೆ ಹೋಗುವಾ ಅಂದ್ರು. ಆದ್ರೆ ರಾಯರು ಯಾವುದಕ್ಕೂ ಒಪ್ಪಿಲ್ಲ. ಅಕ್ಕನ ಮಡಿಲಿಗೆ ಮಗುವನ್ನು ಹಾಕಿದ್ದೇನೆ. ಉಷಾಳಿಗೆ ದೇವರು ಬುದ್ಧಿ ಹೇಗೆ ಕೊಟ್ಟಿದ್ದಾನೋ ಹಾಗೆ ಮಾಡ್ಲಿ. ಒಮ್ಮೆ ಹೊಸ್ತಿಲು ದಾಟಿ ಹೋದವಳನ್ನು ಮತ್ತೆ ಮತ್ತೆ ಕರಿಯೂದು ಸರಿಯಲ್ಲ ಅಂತ ಹೇಳಿ ತಮ್ಮನ್ನು ತಾಳಮದ್ದಳೆಯ ಪ್ರಸಂಗಗಳಲ್ಲಿ ತೊಡಗಿಸಿಕೊಂಡ್ರು.

ಇತ್ತ ಜೋಯಿಸರ ಈ ಉಪ್ರಾಟ ತಡೀಲಿಕ್ಕಾಗದೆ ಕೆಲ ತಿಂಗಳಲ್ಲೇ ಅವರ ಹೆಂಡತಿ ಬಾವಿಗೆ ಹಾರಿ ಜೀವ ತಕ್ಕೊಂಡ್ರು. ಅಂಥ ಸಂದರ್ಭದಲ್ಲಿ ಜೋಯಿಸರ ತಮ್ಮ ಗೋವಿಂದ ಜೋಯಿಸರು ತಮ್ಮ ಊರು ಬಿಟ್ಟು ಕುದ್ರೆಬೆಟ್ಟಿಗೆ ಹೆಂಡತಿ ಮಗನ ಒಟ್ಟಿಗೆ ಬಂದದ್ದು. ಅವರು ಸಾ ತಾಳಮದ್ದಳೆಯಲ್ಲಿ ಅರ್ಥ ಹೇಳುವವರೇ. ಊರಲ್ಲಿ ಅಣ್ಣನ ಹೆಂಡತಿ ತೀರಿಕೊಂಡ ನಂತ್ರ ಆಸ್ತಿ ಪಾಲು ಮಾಡಿಕೊಂಡ್ರು. ತಮಗೆ ಸೇರಿದ ಆಸ್ತಿಯನ್ನು ಮಾರಾಟ ಮಾಡಿ ಕುದ್ರೆಬೆಟ್ಟಿನಲ್ಲಿ ರಾಯರ ಮನೆ ತೋಟ ಇದ್ದ ಹತ್ರವೇ ಖರೀದಿ ಮಾಡಿ ನೆಲೆ ನಿಂತ್ರು. ಬಂದ ಹೊಸದ್ರಲ್ಲೇ ರಾಯರ ಹತ್ರ, ಅಣ್ಣ ಮಾಡಿದ್ದು ಖಂಡಿತಕ್ಕೆ ದೇವರು ಮೆಚ್ಚುವ ಕೆಲಸ ಅಲ್ಲ. ಅತ್ತಿಗೆ ಅವನ ಉಪ್ರಾಟ ತಡೀಲಿಕ್ಕಾಗದೆ ಜೀವ ತಕ್ಕೊಂಡ್ರು. ಈಗ ನಿಮ್ಮ ಹೆಂಡತಿಗೆ ಮಂಕು ಬೂದಿ ಹಾಕಿ ತಂದ ಹಾಗೆ ಇನ್ನೊಂದು ಯಾವುದೋ ಹೆಣ್ಣನ್ನು ತರುವ ತಯಾರಿಯಲ್ಲಿದ್ದಾನಂತೆ. ಊರೆಲ್ಲ ಹೇಸಿಗೆ ಮಾಡಿಕೊಳ್ತಾ ಇದ್ದಾನೆ. ನನ್ನ ಹೆಂಡತಿಯನ್ನು ಸಾ ಕೆಟ್ಟ ದೃಷ್ಟಿಯಿಂದ ನೋಡ್ತಿದ್ದ. ಯಾವತ್ತೋ ಪಾಲಾಗಿ ಬೇರೆ ಮನೆ ಮಾಡ್ಬೇಕು ಅಂತ ಅಂದುಕೊಂಡಿದ್ದೆ. ದೇವತೆಯಂಥ ಅತ್ತಿಗೆಗೆ ಬೇಜಾರಾಗ್ತದೆ ಅಂತ ಸುಮ್ಮನಿದ್ದೆ. ಆದ್ರೆ ಯಾವಾಗ ಆ ಪಾಪಿ ಅವರ ಬಾಳನ್ನೇ ಹಾಳು ಮಾಡಿದ್ನೋ ಇನ್ನು ಅಲ್ಲಿ ಇರೂದು ಸರಿಯಲ್ಲ ಅಂತ ಇಲ್ಲಿಗೆ ಬಂದೆ. ರಾಯರೇ ಅವ ಮಾಡಿದ್ದಕ್ಕೆ ನಿಮ್ಮ ಹತ್ರ ಕ್ಷಮೆ ಕೋರ್ತಾ ಇದ್ದೇನೆ ಅಂತ ಹೇಳಿ ಕಣ್ಣೀರು ಹಾಕಿ ಕಾಲಿಗೆ ಬಿದ್ರು.

ರಾಯರಿಗೆ ಒಂದು ಸರ್ತಿ ಇವರ ಹತ್ರ ಮಾತಾಡ್ಬೇಬಾರ್ದು ಅಂತ ಅನ್ನಿಸಿತ್ತು. ಆದ್ರೆ ಅಣ್ಣನ ತಪ್ಪಿಗೆ ತಾನು ಬಂದು ಕಣ್ಣೀರು ಹಾಕ್ತಾ ಇದ್ದಾನೆ. ಹಾಗಾಗಿ ಪ್ರಾಮಾಣಿಕ ಇದ್ರೂ ಇರ್ಬಹುದು ಅಂತ ಅನ್ನಿಸಿತು. ಕಡೆಗೆ ಪ್ರೀತಿಯಿಂದ ಅರಂಟಿ (ಅಪ್ಪಿ) ಹಿಡ್ಕೊಂಡ್ರು. ಹೀಗೆ ಅವರಿಬ್ಬರೂ ಒಳ್ಳೇ ಜೋಸ್ತಿ (ದೋಸ್ತಿ)ಗಳಾದರು.

ಈ ನಡುವೆ ತ್ರಿವಿಕ್ರಮ ಜೋಯಿಸರಿಗೆ ಖ್ಯಾತಿಯ ಅಮಲು ತಲೆಗೇರಿ ಕುಡಿತದ ಚಟವೂ ಅಂಟಿಕೊಂಡಿತು. ತಾಳಮದ್ದಳೆಗೆ ಬರ್ತೇನೆ ಅಂತ ಹೇಳಿ ಬರದೇ ಇರೂದು, ಬಂದ್ರೂ ಕುಡ್ದು ಟೈಟ್ಟಾಗಿ ಯೆಂತೆಂಥದೋ ಅರ್ಥ ಹೇಳೂದು ಎಲ್ಲ ಸುರುವಾಯ್ತು. ಗಂಡ, ಮಗನನ್ನು ಬಿಟ್ಟು ಬಂದಿದ್ದ ಉಷಾಳೂ ಸುಖ ಕಾಣ್ಲಿಲ್ಲ. ಸರೀ ಹೊಡಿಯೂದು, ಬಯ್ಯುದು ಎಲ್ಲ ಮಾಡ್ಲಿಕ್ಕೆ ಸುರು ಮಾಡಿದ್ರು. ಅವಳಿಂದ್ಲೂ ಮಕ್ಕಳಾಗ್ಲಿಲ್ಲ, ನಿನ್ನಿಂದ್ಲೂ ಆಗ್ಲಿಲ್ಲ. ಹೋಗಿ ಸಾಯಿ ರಂಡೆ! ಅಂತ ಒಂದು ದಿನ ನಾಯಿಗೆ ಹೊಡ್ದ ಹಾಗೆ ಹೊಡ್ದಿದ್ರು. ಒಂದು ದಿನ ಹೊಡೆತ ತಾಳ್ಳಿಕ್ಕೆ ಆಗದೆ ಮನೆ ಬಿಟ್ಟು ಓಡಿ ಹೋದವಳು ಎಲ್ಲಿಗೆ ಹೋದ್ಲು ಅಂತ ಇಲ್ಲ. ತಾಳಮದ್ದಳೆಗೆ ಕರಿಯುವವರು ಕಡಮೆಯಾಗಿ ತ್ರಿವಿಕ್ರಮ ಜೋಯಿಸರು ಮೂಲೆ ಸೇರಿದ್ರು.

ಇಷ್ಟೆಲ್ಲ ಆದದ್ದು ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ.

ಈಗ ಗೋವಿಂದ ಜೋಯಿಸ ಮಾರುತಿರಾಯರ ಜೋಡಿ ತಾಳಮದ್ದಳೆ ಯಲ್ಲಿ ಭಾರೀ ರೈಸ್ತಿತ್ತು. ಗೋವಿಂದ ಜೋಯಿಸರು ಅಣ್ಣನನ್ನು ಮೀರಿಸುವ ಹಾಗಾದ್ರು. ಗೋವಿಂದ ಜೋಯಿಸ ಮಾರುತಿರಾಯರ ಮಕ್ಕಳೂ ಸಾ ಒಳ್ಳೆಯ ಜೋಸ್ತಿಗಳು. ಜೋಯಿಸರ ಮಗ ಅಶ್ವಿನ್, ರಾಯರ ಮಗ ಹೃಷೀಕೇಶ ಇಬ್ರೂ ಸುರತ್ಕಲ್‌ನಲ್ಲಿ ಎಂಜಿನಿಯರಿಂಗ್ ಮುಗಿಸಿ ಬೆಂಗ್ಳೂರಲ್ಲಿ ದೊಡ್ಡ ಕಂಪೆನಿ ಸೇರಿದ್ದಿದ್ರು. ಅಲ್ಲಿ ಇದ್ದದ್ದು ಒಟ್ಟಿಗೇ. ಊರಿಗೆ ಹೋಗಿ ಬರ್ತಾ ಇದ್ದದ್ದು ಸಾ ಒಟ್ಟಿಗೇ. ಇಬ್ರೂ ಸಾ ತಮ್ಮ ಅಪ್ಪಂದಿರಿಗೆ ಕಾರು, ಹೊಸ ಮೊಬೈಲ್ ಫೋನು ಎಲ್ಲ ತೆಗೆಸಿಕೊಟ್ಟಿದ್ರು. ನೀವು ಎಲ್ಲಿಯೇ ಓಡಾಡುದಿದ್ರೂ ಕಾರಲ್ಲೇ ಓಡಾಡಿ. ಒಂದೊಂದು ದಿವಸ ಒಬ್ಬೊಬ್ರ ಕಾರಲ್ಲಿ ಹೋಗಿ. ಬಸ್ಸಲ್ಲಿ ತಿರುಗಾಡಿ ಜೀವ ಹಾಳು ಮಾಡಿಕೊಳ್ಳೂದು ಬೇಡ ಅಂತ ಹೇಳಿದ್ದಿದ್ರು. ಹಾಗಾಗಿ ಅವರಿಬ್ರೂ ಡ್ರೈವಿಂಗ್ ಕಲ್ತು ಕಾರ್‌ನಲ್ಲೇ ಓಡಾಡ್ತಿದ್ರು.

ಹೀಗಿರುವಾಗ್ಲೇ ಅವತ್ತು ಚೌತಿಯ ದಿನ ಊರಿಗೆ ಬರ್ತೇವೆ ಅಂತ ಹೇಳಿದ್ದ ಮಕ್ಕಳನ್ನು ಎದುರುಗೊಳಿಕ್ಕೆ ಅವರು ರೆಡಿಯಾಗ್ತಾ ಇದ್ರು. ಆದ್ರೆ ಬಸ್ಸಲ್ಲಿ ಬರ್ತೇವೆಂತ ಹೇಳಿದ್ದ ಅವರು ಬೈಕಲ್ಲಿ ಬರ್ತೇವೆಂತ ಹೇಳಿದಾಗ ಅವರಿಬ್ರಿಗೂ ಮಂಡೆ ಬಿಸಿ ಆಗಿದ್ದು. ಅಶ್ವಿನ್ ಸುಮಾರು ಮೂರು ಲಕ್ಷದ್ದು ಒಂದು ಹೊಸಾ ಬೈಕ್ ತಕ್ಕೊಂಡಿದ್ದ. ಅದ್ರಲ್ಲೇ ಊರಿಗೆ ಹೋಗ್ಬೇಕು ಅಂತ ಎಣಿಸ್ತಾ ಇದ್ದ. ಆದ್ರೆ ಸತ್ಯ ಹೇಳಿದ್ರೆ ಅಪ್ಪ ಬಿಡೂದಿಲ್ಲಾಂತ ಹೇಳಿ ಕಡೇ ಮೊಮೆಂಟಿಗೆ ಬಸ್ಸಲ್ಲಿ ಟಿಕೇಟ್ ಸಿಗ್ಲಿಲ್ಲ ಅಂತ ಸುಳ್ಳು ಹೇಳಿ ಬೈಕಲ್ಲೇ ಊರಿಗೆ ಹೋಗೂದು ಅಂತ ಲೆಕ್ಕ ಹಾಕ್ಕೊಂಡಿದ್ದ. ಹೃಷೀಕೇಶನಿಗೂ ಹಾಗೆಯೇ ಹೇಳಿದ್ದ. ಅವನೂ ಒಪ್ಪಿದ್ದ. ಹಾಗಾಗಿ ಚೌತಿಯ ದಿವಸ ಅವರಿಬ್ಬರಿಬ್ಬರಿಗೂ ಅಷ್ಟೆಲ್ಲ ಮಂಡೆ ಬಿಸಿ ಆದದ್ದು.

ಚೌತಿಯ ದಿವಸ ಇಬ್ಬರ ಮನೆಯಲ್ಲೂ ಮೂರು ತೆಂಗಿನ ಕಾಯಿದ್ದು ಗಣಹೋಮ ನಡಿಯೂದು ಪದ್ಧತಿ. ಅದು ಮುಗಿಸಿ ಬ್ರಾಹ್ಮಣರಿಗೆ ಹಸ್ತೋದಕ ಕೊಟ್ಟು ಹಬ್ಬದ ಊಟ ಮಾಡಿ ಪಾಂಬೆಟ್ಟಿಗೆ ಮಧ್ಯಾಹ್ನ ನಡೀಲಿಕ್ಕಿದ್ದ

**ವಾಸ!**

ಪ್ರತಿ ವರ್ಷ  
ಬಂದಾಗ  
ನವೆಂಬರ್ ಮಾಸ  
ಕನ್ನಡಕ್ಕೆ  
ಬೆಂಗಳೂರಿನಲ್ಲಿ  
ಒಂದು ತಿಂಗಳು  
ವಾಸ!

★ ಗೀತಾಶಾಸ್ತ್ರಿ

